ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 28 ॥ ಸಂಚಿಕೆ : 24॥ UDP/1263/2018-20 || R.NO.50495/91 ॥ ತಾರೀಕು : 24–07–2018 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

# ಶೀರೂರುಶ್ರೀ ಅಸಹಜ ಅಗಲಿಕೆ ಸುದ್ಧಿಯಾದ ಕುಂದಾಪುರ

## ಕಾನೂನು ನೆರವಿಗೆ ಕುಂದಾಪುರಕ್ಕೆ

**ಉಡುಪಿ ಅಷ್ಟಮಠಗಳಲ್ಲಿ ಒಂದಾದ ಶಿರೂರು ಮಠದ ಶ್ರೀ ಲಕ್ಷ್ಮೀವರ ತೀರ್ಥ ಸ್ವಾಮೀಜಿಯವರ ಅಸಹಜ ಸಾವು ದೇಶಾದ್ಯಂತ ಭಾರಿ ಚರ್ಚೆಗೆ ಕಾರಣವಾಗಿದೆ. ಕುಂದಾಪುರ ತಾಲ್ಲೂಕಿನವರೇ ಆಗಿದ್ದ ಇವರು ಕುಂದಾಪುರ ವಕೀಲರ ಬಳಿ ಕಾನೂನು ನೆರವಿಗಾಗಿ ಆಗಮಿಸಿದ್ದು, ಕುಂದಾಪುರ ಇನ್ನಷ್ಟು ಸುದ್ಧಿಯಾಗಲು ಕಾರಣವಾಗಿದೆ.**



ಕುಂದಾಪುರ ತಾಲ್ಲೂಕಿನ ಮಲೆನಾಡ ತಪ್ಪಲಿನ ಮಡಾಮಕ್ಕಿಯಲ್ಲಿ ಜನಿಸಿ, ಉಡುಪಿ ಮಠದ ಚಾವಡಿಯಲ್ಲೇ ಇದ್ದು, ಪ್ರಾಥಮಿಕ ವಿದ್ಯಾಭ್ಯಾಸ ನಡೆಸುತ್ತಿದ್ದಾಗ, ಎಂಟರ ಎಳವೆಯಲ್ಲೇ ಶ್ರೀ ಶಿರೂರು ಮಠದ 30 ನೇ ಉತ್ತರಾಧಿಕಾರಿಯಾಗಿ ಆಯ್ಕೆಗೊಂಡು, ಸನ್ಯಾಸ ದೀಕ್ಷೆ ಪಡೆದುಕೊಂಡು, ಶ್ರೀ ಲಕ್ಷ್ಮೀವರತೀರ್ಥ" ರೆಂದು ಶ್ರೀ ಸೋದೆ ಮಠಾಧೀಶರಿಂದ ನಾಮಾಂಕಿತರಾದುದು ಹರೀಶ ಆಚಾರ್ಯ ಎಂಬ ಬಾಲಕನ ಜೀವನದ ದೊಡ್ಡ ತಿರುವು.

ಮೂರು ಪರ್ಯಾಯ ಯಶಸ್ವಿಯಾಗಿ ನಡೆಸಿ, ವಾದ್ಯ, ಸಂಗೀತ, ಚಿತ್ರಕಲೆ, ತಂತ್ರಜ್ಞಾನ, ಈಜು ಎಲ್ಲದರಲ್ಲೂ ಆಸಕ್ತಿ ವಹಿಸಿ ಶಿಕ್ಷಣ ಕ್ಷೇತ್ರ, ಕಲಾಕ್ಷೇತ್ರದ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದ ವಿಶಿಷ್ಟ ವ್ಯಕ್ತಿತ್ವದ ಯತಿ ಶ್ರೀ ಲಕ್ಷ್ಮೀವರ ತೀರ್ಥರು.

ಅದರೆ ಮಠದ ಇತರ ಮಠಾಧೀಶರ ನಡೆಗಳಿಗೆ ವ್ಯತಿರಿಕ್ತವಾಗಿ ಇತ್ತೀಚಿನ ವರ್ಷಗಳಲ್ಲಿ ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ್ದ ಶೀರೂರು ಶ್ರೀಗಳು ಹಲವರಿಂದ ಟೀಕೆಗೂ ಒಳಗಾಗಿದ್ದರು. ಆದರೆ ಸಮಾಜಕ್ಕೆ ಅನುಕೂಲವಾದ ಸೇವೆಯನ್ನು ಮಾಡುತ್ತಿದ್ದರಿಂದ ಅಭಿಮಾನಿಗಳನ್ನು ಬೆಳೆಸಿಕೊಂಡಿದ್ದರು.

ಶೀರೂರು ಮಠಾಧೀಶರ ನಡವಳಿಕೆಯಿಂದ ಬೇಸರಗೊಂಡಿದ್ದ ಶ್ರೀ ಕೃಷ್ಣ ಮಠದ ಹೆಚ್ಚಿನ ಮಠಾಧೀಶರು ಅದಷ್ಟು ಅವರನ್ನು ದೂರವಿಡಲು ಪ್ರಯತ್ನಿಸುತ್ತಿರುವುದು ಕಂಡು ಬಂದಿತ್ತು. ಪೇಜಾವರ ಮಠಾಧೀಶರೂ, ಶೀರೂರು ಮಠಾಧೀಶರ ಬಗ್ಗೆ ಅಸಮಾಧಾನಗೊಂಡಿದ್ದರು. ಇತ್ತೀಚೆಗೆ ಅವರು ಮಠಾಧೀಶರ ವ್ಯಕಿತ್ವ ಕುರಿತು ನೀಡಿದ್ದರೆನ್ನಲಾದ ವಿಡಿಯೋ ಸಂದರ್ಶನ ಉಳಿದ ಮಠಾಧೀಶರನ್ನು ಕೆರಳಿಸಿದ್ದು, ಅನಾರೋಗ್ಯ ನಿಮಿತ್ತ ಅವರು ಪೂಜೆಗಾಗಿ ನೀಡಿದ್ದ ಪಟ್ಟದ ದೇವರನ್ನು ಹಿಂದಿರುಗಿಸಲು ನಿರಾಕರಿಸಿದ್ದರು. ಶಿಷ್ಯ ಸ್ವೀಕಾರ ಮಾಡಿದರೆ ನೀಡಬಹುದು ಎಂಬ ಸಲಹೆ ಬಂತು.

"ಅನ್ನ ವಿಠಲ ನನ್ನವ, ಕೊಡದಿದ್ದರೆ ದಾವೆ ಹೂಡುವೆ" ಎಂದು ಉಳಿದ ಮಠಾಧೀಶರಿಗೆ ಎಚ್ಚರಿಕೆ ನೀಡಿದ್ದ ಶೀರೂರು ಶ್ರೀಗಳು, ಕಾನೂನು ನೆರವು ಪಡೆಯಲು ಕುಂದಾಪುರದ ಖ್ಯಾತ ನ್ಯಾಯವಾದಿ ರವಿಕಿರಣ್ ಮುರ್ಡೇಶ್ವರ ಅವರ ಕಛೇರಿಗೆ ಆಗಮಿಸಿ ಬಹಳ ಹೊತ್ತು ಅವರೊಡನೆ ಚರ್ಚೆ ನಡೆಸಿದ್ದರು.

ಜೂನ್ 28 ರಂದು ಆಗಮಿಸಿದ ಶಿರೂರು ಶ್ರೀಗಳು ಹಲವಾರು ವಿಷಯಗಳ ಬಗ್ಗೆ ವಿಚಾರ ವಿನಿಮಯ ನಡೆಸಿ, ಪಟ್ಟದ ದೇವರು ಮರಳಿಸದಿದ್ದರೆ, ಕ್ರಿಮಿನಲ್ ಕೇಸ್ ಹಾಕಬೇಕು ಎಂದಿದ್ದರು. ಅದರಂತೆ ನ್ಯಾಯಾಲಯದಲ್ಲಿ ಐಪಿಸಿ 406 ರಂತೆ ದೂರು ದಾಖಲಿಸುವ ಸಿದ್ಧತೆ ನಡೆದಿತ್ತು. ಅಷ್ಟರಲ್ಲೇ ಅವರು ಅಗಲಿರುವುದು ಖೇದದ ಸಂಗತಿ" ಎನ್ನುತ್ತಾರೆ ನ್ಯಾಯವಾದಿ ರವಿಕಿರಣ್ ಮುರ್ಡೇಶ್ವರ್.

**ಶ್ರೀ ಶಿರೂರು ಶ್ರೀಗಳು ಅಸ್ತಂಗತ :**

ಶ್ರೀ ಶಿರೂರು ಮಠಾಧೀಶರು ಜುಲೈ 19 ರಂದು ಅಸ್ತಂಗತರಾದುದು ದೇಶಾದ್ಯಾಂತ ಸುದ್ಧಿಯಾಯಿತು. ಅದರಲ್ಲೂ ಕೆ.ಎಂ.ಸಿ. ಆಸ್ಪತ್ರೆಯ ವೈದ್ಯರು ವಿಷದ ಅಂಶ ಕಂಡು ಬಂದಿದೆ ಎಂದು ತಿಳಿಸಿದ ಮೇಲೆ, ಈಗ ಮುದ್ರಣ ಮಾಧ್ಯಮ, ದೃಶ್ಯ ಮಾಧ್ಯಮಗಳಲ್ಲಿ ನಾನಾ ರೀತಿಯ ಊಹಾಪೋಹಗಳು ಹರಿದಾಡಿವೆ. ದೃಶ್ಯ ಮಾಧ್ಯಮಗಳಂತೂ ತಾವೇ ತನಿಖೆ ನಡೆಸಿದಂತೆ ತೀರ್ಪು ನೀಡುವ ಮಟ್ಟಕ್ಕೆ ಬಂದಿವೆ. ಅದರಲ್ಲೂ ಮುಂಬೈ ಉದ್ಯಮಿಗಳು ಮತ್ತು ಮಹಿಳೆ ಬಗ್ಗೆ ಹತ್ತಾರು ಕಥೆಗಳು ಹುಟ್ಟಿಕೊಂಡಿವೆ. ಪೋಲಿಸರಿಗೆ ಮಹಿಳೆ ತನಿಖೆಗೆ ಸಿಗದಿದ್ದರೂ ದೃಶ್ಯ ಮಾಧ್ಯಮಗಳಲ್ಲಿ ಕಲ್ಪನಾ ಕಥೆಗಳು ಬಿತ್ತರಗೊಳ್ಳುತ್ತಿವೆ.

ಪೇಜಾವರ ಶ್ರೀಗಳು ಶೀರೂರು ಶ್ರೀಗಳಿಗೆ ಅಮಲು ಪದಾರ್ಥಗಳ ಸೇವನೆ, ಮಹಿಳಾ ಸಂಪರ್ಕ ಇದೆ ಎಂಬಂತೆ ಹೇಳಿಕೆ ಕೊಟ್ಟ ಮೇಲೆ ಶೀರೂರು ಶ್ರೀಗಳ ಸಂದರ್ಶನದ ವೀಡಿಯೋ, ಮಹಿಳೆಯ ಫೋಟೋಗಳು ಪ್ರಸಾರಗೊಳ್ಳುತ್ತಿವೆ. ಕೋಟ್ಯಾಂತರ ರೂಪಾಯಿ ಹಣಕಾಸಿನ ಲೆಕ್ಕಾಚಾರದ ಬಗ್ಗೆ ನಾನಾ ವರದಿಗಳು ಬರುತ್ತಿವೆ. ಈ ನಡುವೆ ಮಾಜಿ ಮ್ಯಾನೇಜರ್ ಮಹಿಳೆ ಬಗ್ಗೆ ಕಿಡಿಕಾರಿದ್ದು ಇನ್ನಷ್ಟು ಸುದ್ದಿಯಾಗಿದೆ.



ನನ್ನ ಕಛೇರಿಗೆ ಬಂದು ಆರು ಮಠದ

8 ಮಠಾಧೀಶರ ವಿರುದ್ಧ ಕೆವಿಯಟ್ ಹಾಕಲು ಬಂದಿದ್ದರು. ಪಟ್ಟದ ದೇವರನ್ನು ಮರಳಿಸದ ಬಗ್ಗೆ ಖಾಸಗಿ ದೂರು ದಾಖಲಿಸಬೇಕು ಎಂದಿದ್ದರು. ಅವರು ಎರಡು ಗಂಟೆಗಳ ಕಾಲ ಹಲವು ವಿಚಾರಗಳನ್ನು ತಿಳಿಸಿದ್ದಾರೆ. ಎಲ್ಲವನ್ನೂ ತಿಳಿಸಲು ಆಗುವುದಿಲ್ಲ. ಸಾವು ಅಸಹಜ ಎಂದು ಈಗ ದಾಖಲಾಗಿದೆ. ಮುಂದೆ ಅಪರಾಧ ಆಗಿದೆಯೇ ಎಂಬ ತನಿಖೆ' ನಡೆಯಬೇಕು. ಅಪರಾಧಿ ಯಾರು ಎಂದು ತನಿಖೆ ನಡೆಸಬೇಕಾಗುತ್ತದೆ.

(12ನೇ ಪುಟಕ್ಕೆ)

## ಗೃಹಣದಿಂದಾಗುವ ಅರಿಷ್ಠ ಫಲ

ಗೃಹಣದ ಬಗ್ಗೆ ನಾನಾ ನಂಬಿಕೆಗಳು, ಅಪನಂಬಿಕೆಗಳು ಇವೆ. ದೃಶ್ಯಮಾಧ್ಯಮಗಳಲ್ಲಂತೂ ಗೃಹಣದಿಂದಾಗುವ ಸಮಸ್ಯೆಗಳ ಬಗ್ಗೆ ವಿಚಿತ್ರ ವಿಚಿತ್ರವಾಗಿ ವಿವರಿಸುತ್ತಾರೆ. ಕೆಲವರು ಹೆದರಿಸುತ್ತಾರೆ. ಗೃಹಣದಿಂದ ಅಂತಹ ಅಪಾಯವೇನೂ ಇಲ್ಲ.

(6ನೇ ಪುಟಕ್ಕೆ)

ಸಾಧಕನಿಗೆ ಶುಭಹಾರೈಕೆ



ಅಜಯ್ ಹರೀಶ್ ಶೆಣೈ
ಮೆ। ಟಿ.ಎನ್.ಪ್ರಭು ಎಂಡ್ ಕೊ
ಚಾರ್ಟರ್ಡ್ ಅಕೌಂಟೆಂಟ್ಸ್ –ಕುಂದಾಪುರ

ಭಾರತೀಯ ಸನ್ನದು ಲೆಕ್ಕ ಪರಿಶೋಧಕರ ಸಂಸ್ಥೆ ಮೇ 2018 ರಲ್ಲಿ ನಡೆಸಿದ C.A. ಅಂತಿಮ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಪ್ರಥಮ ಪ್ರಯತ್ನದಲ್ಲೇ ಯಶಸ್ಸು ಗಳಿಸಿದ ಸಾಧಕನಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾ ಶುಭ ಹಾರೈಸುವ,

* ಪಿ.ಆರ್.ಶೆಣೈ –ಶ್ರೀಮತಿ ಸುನಂದಾ ಪಿ.ಶೆಣೈ, ಥಾನೆ (ಅಜ್ಜ–ಅಜ್ಜಿ)
* ಶ್ರೀಮತಿ ಸುಜಾತ ಮುಕುಂದ ಪ್ರಭು (ಅಜ್ಜಿ)
* ಹರೀಶ್ ಪಿ.ಶೆಣೈ–ಶ್ರೀಮತಿ ವಿಜಯಾ ಎಚ್. ಶೆಣೈ ಕುಂದಾಪುರ
* ಮಹಿಮಾ ಶೆಣೈ (ಸಹೋದರಿ)
* ಗಣೇಶ ಕಾಮತ್ ಕುಂದಾಪುರ ಮತ್ತು ಕುಟುಂಬಸ್ಥರು
* ಸಂದೀಪ ಯು.ಕಾಮತ್–ಶ್ರೀಮತಿ ಸಂಗೀತಾ ಕಾಮತ್ ಮುರ್ಡೇಶ್ವರ
* ಸಂದೀಪ್ ಭಟ್– ಶ್ರೀಮತಿ ಶ್ರುತಿ ಎಸ್.ಭಟ್, ಬೆಂಗಳೂರು

ಹಾಗೂ ಸ್ನೇಹಿತರು, ಸಂಬಂಧಿಕರು

ಕುಂದಾಪುರದಲ್ಲಿ 5 ದಶಕಗಳಿಂದ ನಿರಂತರ ಸೇವೆಯಲ್ಲಿರುವ
ವಸಂತ ಬೇಕರಿ



ಗ್ರಾಹಕರ ಅನುಕೂಲತೆಗಾಗಿ ಅತ್ಯಂತ ಸುಸಜ್ಜಿತವಾಗಿ ಇನ್ನೊಂದು ನೂತನ ಮಾರಾಟ ಕೇಂದ್ರವನ್ನು ಪ್ರಾರಂಭಿಸಲಾಗಿದೆ.



ಕಾರ್ಪೋರೇಶನ್ ಬ್ಯಾಂಕ್ ಬಳಿ, ಮುಖ್ಯ ರಸ್ತೆ, ಕುಂದಾಪುರ
ಫೋನ್ : 08254–230503, ಮೊ: 9448171188

